# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ತಿ.ನರಸೀಪುರ

<u>ಸಿಸಿ ಸಂಖ್ಯೆ 287/2015</u>

CW-38/PW-3

| | | |
|---|---|---|
| ಹೆಸರು | : | ಸಂತೋಷ್ ಕಶ್ಯಪ್ |
| ತಂದೆ/ಗಂಡನ ಹೆಸರು | : | ಕೆ.ಆರ್.ರಾಮಪ್ರಸಾದ್ |
| ವಯಸ್ಸು | : | 39 ವರ್ಷ |
| ವೃತ್ತಿ | : | ಪೊಲೀಸ್ ನಿರೀಕ್ಷಕರು |
| ವಾಸ ಸ್ಥಳ | : | ಹನೂರು ಪೊಲೀಸ್ ಠಾಣೆ |
| ದಿನಾಂಕ | : | **24-11-2022** |

**ದಂಡ ಪ್ರಕ್ರಿಯಾ ಸಂಹಿತೆ ಕಲಂ 299 ರಡಿಯಲ್ಲಿ ಸಾಕ್ಷಿದಾರರ ವಿಚಾರಣೆಃ**

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು

**<u>ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-</u>**

ನಾನು 27/11/2010 ರಿಂದ 13/09/2012 ರವರೆಗೆ ತಿ.ನರಸೀಪುರ ಪೊಲೀಸ್ ಠಾಣೆಯಲ್ಲಿ ಉಪನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 28/11/2010 ರಂದು ಈ ಪ್ರಕರಣದ ಮುಂದುವರಿದ ತನಿಖೆಯನ್ನು ಕಡತ ಸಮೇತವಾಗಿ ಚಾಸಾ-37 ಇವರಿಂದ ಪಡೆದುಕೊಂಡಿರುತ್ತೇನೆ. ಅದೇ ದಿನ ತಿ.ನರಸೀಪುರ ಪಟ್ಟಣ ಪಂಚಾಯ್ತಿಗೆ ಭೇಟಿ ನೀಡಿ ಪ್ರಕರಣಕ್ಕೆ ಸಂಬಂಧಿಸಿದಂತೆ ದಾಖಲಾತಿಗಳನ್ನು ಹಾಜರುಪಡಿಸುವಂತೆ ಮನವಿ ಪತ್ರ ಸಲ್ಲಿಸಿರುತ್ತೇನೆ. ದಿನಾಂಕ 05/06/2012 ರಂದು ಪಟ್ಟಣ ಪಂಚಾಯ್ತಿ, ತಿ.ನರಸೀಪುರಕ್ಕೆ ಭೇಟಿ ನೀಡಿ ಅಲ್ಲಿಯ ಲೆಕ್ಕಪತ್ರ ವಿಭಾಗದ ಚಾಸಾ-24 ವಿನಯ್ ಕುಮಾರ್ ಇವರು ನೀಡಿದ ಟ್ರೆಶರಿ ಚೆಕ್ ಬುಕ್ ಕೌಂಟರ್ ಫೈಲ್ ಬುಕ್ ನಂ.148001 ರಿಂದ 148100 ಮತ್ತು 148201 ರಿಂದ 148300,

148301 ರಿಂದ 148400 ಅವುಗಳನ್ನು ಮತ್ತು ತಿ.ನರಸೀಪುರ ಕೆನರಾ ಬ್ಯಾಂಕ್ ಶಾಖೆಯ ಚೆಕ್ ಬುಕ್ ಕೌಂಟರ್ ಫೈಲ್ ನಂ.230476 ರಿಂದ 230500 ಇವುಗಳನ್ನು ಪಂಚರ ಸಮಕ್ಷಮದಲ್ಲಿ ಸಂಜೆ 4.15 ರಿಂದ 5.15 ಗಂಟೆಯವರೆಗೆ ಪಂಚನಾಮೆ ಕ್ರಮ ಜರುಗಿಸಿ ಅಮಾನತ್ತುಪಡಿಸಿಕೊಂಡಿರುತ್ತೇನೆ.

ದಿನಾಂಕ 12/06/2012 ರಂದು ಉಳಿದ ದಾಖಲೆಗಳನ್ನು ಹಾಜರುಪಡಿಸುವಂತೆ ದಂಡ ಪ್ರಕ್ರಿಯಾ ಸಂಹಿತೆ ಕಲಂ 91 ರಡಿಯಲ್ಲಿ ಫಿರ್ಯಾಧಿದಾರರಿಗೆ ನೋಟೀಸನ್ನು ನೀಡಿರುತ್ತೇನೆ. ದಿನಾಂಕ 14/08/2012 ರಂದು ಚಾಸಾ-24 ರವರು ಠಾಣೆಗೆ ಹಾಜರಾಗಿ ಪ್ರಕರಣಕ್ಕೆ ಸಂಬಂಧಿಸಿದ ಸಾಮಾನ್ಯ ನಿಧಿ ಕ್ಯಾಶ್ ಪುಸ್ತಕ ಹಾಜರು ಮಾಡಿದ್ದು ಅದನ್ನು, 12 ನೇ ಹಣಕಾಸು ನಗದು ಪುಸ್ತಕ, ಸಾಮಾನ್ಯ ನಿಧಿ ಕ್ಯಾಶ್ ಪುಸ್ತಕ, ನೀರಿನ ಕಂದಾಯ ನಗದು ಪುಸ್ತಕ, ಎಸ್.ಎಸ್.ನಗದು ಪುಸ್ತಕಗಳು ಇವುಗಳನ್ನು ಸಂಜೆ 4 ರಿಂದ 4.30 ರವರೆಗ ಪಂಚರ ಸಮಕ್ಷಮದಲ್ಲಿ ಪಂಚನಾಮೆಯಡಿ ಅಮಾನತ್ತು ಮಾಡಿಕೊಂಡಿರುತ್ತೇನೆ. ನಂತರ ಪ್ರಕರಣದ ಮುಂದುವರಿದ ತನಿಖೆಯನ್ನು ಚಾಸಾ-39 ಇವರಿಗೆ ವಹಿಸಿಕೊಟ್ಟಿರುತ್ತೇನೆ.

ದಿನಾಂಕ 30/03/2011 ರಂದು ಚಾಸಾ-2 ಮತ್ತು 3 ಇವರ ಹೇಳಿಕೆಗಳನ್ನು ದಾಖಲು ಮಾಡಿಕೊಂಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ ಮೇರೆಗೆ ಮುಂದೂಡಲಾಯಿತು.**

(ಸಾಕ್ಷಿದಾರರ ಹೇಳಿಕೆಯನ್ನು ಯಥಾವತ್ತಾಗಿ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ತಿ.ನರಸೀಪುರ.